ಅ) ಅರಣ್ಯ ಇಲಾಖೆಯವರು ಈವರೆಗೂ ಒಟ್ಟು 6 (ಆರು) ಪ್ರಕರಣಗಳನ್ನು ದಾಖಲು ಮಾಡಿಕೊಂಡಿದೆ.

ಇ) ಅಕ್ರಮ ಕಡತಲೆಗಳನ್ನು ತಡೆಗಟ್ಟಲು ಇಲಾಖಾ ಸಿಬ್ಬಂದಿಗಳು ಪ್ರತಿ ದಿವಸ ಕೆಲಸವನ್ನು ತಪ್ಪದೇ ನಿರ್ವಹಿಸುತ್ತಿದ್ದಾರೆ. ಈ ಬಗ್ಗೆ ಸೂಕ್ತ ನಿಗಾ ವಹಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶಿಸಿದೆ.

ವಿಷಯ:- ಮೈಸೂರು ನಗರದ ಸಾಂಕ್ರಾಮಿಕ ರೋಗದ ಆಸ್ಪತ್ರೆ ಕೆ.ಆರ್.ಎಸ್. ರಸ್ತೆಗೆ ಸ್ಥಳಾಂತರ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 457 (627)

ಶ್ರೀ ಇ.ಮಾರುತಿರಾವ್ ಪವಾರ್ (ನರಸಿಂಹರಾಜ):- ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಿಟ್ಟು ಉತ್ತರಿಸುವರೆ?

1) ಮೈಸೂರು ನಗರದ ತಿಲಕನಗರದಲ್ಲಿ ನಾಲ್ಕುವರೆ ಎಕರೆ ವಿಸ್ತೀರ್ಣದ (ಇಡಿ ಆಸ್ಪತ್ರೆ) ಸಾಂಕ್ರಾಮಿಕ ರೋಗದ ಆಸ್ಪತ್ರೆಯು ಕೆ.ಆರ್.ಎಸ್. ರಸ್ತೆಗೆ ಸ್ಥಳಾಂತರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಇದೇ ಸ್ಥಳದಲ್ಲಿ ರಾಜ್ಯ ಸರ್ಕಾರದ ವತಿಯಿಂದ ಕೆ.ಆರ್.ಆಸ್ಪತ್ರೆಗೆ ಸಂಬಂಧಿಸಿದಂತೆ 150 ಹಾಸಿಗೆವುಳ್ಳ ಸಾಮಾನ್ಯ ಚಿಕಿತ್ಸಾ ವಿಭಾಗ ಹಾಗೂ ಆಯವ್ಯಯದಲ್ಲಿ 40 ಲಕ್ಷ ರೂ.ಗಳು ಈ ಆಸ್ಪತ್ರೆಗಾಗಿ ತೆಗೆದಿರಿಸಲಾಗಿದ್ದು, ಈ ಕಟ್ಟಡ ತಕ್ಷಣದಲ್ಲಿ ಪ್ರಾರಂಭವಾಗಲು ಸರ್ಕಾರವು ತೆಗೆದುಕೊಂಡ ಕ್ರಮವೇನು?

ಡಾ॥ ಎಂ.ಶಂಕರನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು):-

1) ಬಂದಿದೆ.

2) ಸರ್ಕಾರದ ಪರಿಶೀಲನೆಯಲ್ಲಿದೆ.

ವಿಷಯ:- ಸಿದ್ಧಾರ್ಥ ಬಡಾವಣೆ ಮತ್ತು ಕ್ಯಾತಮಾರನಹಳ್ಳಿ ಬಡಾವಣೆಗೆ ಹತ್ತು ಹಾಸಿಗೆಯುಳ್ಳ ಹೆರಿಗೆ ಆಸ್ಪತ್ರೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :458 (628)

ಶ್ರೀ ಇ.ಮಾರುತಿರಾವ್ ಪವಾರ್ (ನರಸಿಂಹರಾಜ):- ಮಾನ್ಯ ಆರೋಗ್ಯ ಮತ್ತು ಕುಟುಂಬಾ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಿಟ್ಟು ಉತ್ತರಿಸುವರೆ.

ಅ) ಸಿದ್ಧಾರ್ಥ ಬಡಾವಣೆ ಮತ್ತು ಕ್ಯಾತಮಾರನಹಳ್ಳಿ ಬಡಾವಣೆಗೆ ಹತ್ತು ಹಾಸಿಗೆಯುಳ್ಳ ಹೆರಿಗೆ ಆಸ್ಪತ್ರೆಯ ಮಂಜೂರಾತಿ ಮೊರಕಿರುವುದು ನಿಜವೇ?

ಆ) ಹಾಗಿದ್ದಲ್ಲಿ, ಸದರಿ ಆಸ್ಪತ್ರೆಯ ಕಟ್ಟಡದ ಕೆಲಸವನ್ನು ಪ್ರಾರಂಭಿಸದಿರಲು

ಕಾರಣಗಳೇನು?

ಡಾ॥ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) ಮೈಸೂರಿನ ಸಿದ್ಧಾರ್ಥ ಬಡಾವಣೆಗೆ ಸರ್ಕಾರದ ಆದೇಶ ಸಂಖ್ಯೆ ಆಕುಕ 208 ಸಿಜಿಎಂ 86, ದಿನಾಂಕ 2.8.88ರಲ್ಲಿ ಮಂಜೂರಾಗಿದ್ದು ಇದನ್ನು 10 ಹಾಸಿಗೆಗಳ ಪ್ರಸೂತಿ ಗೃಹವನ್ನಾಗಿ ಕ್ಯಾತಮಾರನಹಳ್ಳಿ, ಬಡಾವಣೆಗೆ ಸರ್ಕಾರದ ಆದೇಶ ಸಂಖ್ಯೆ ಆಕುಕ 147 ಆಯೋಸಂ 95 ದಿನಾಂಕ 5.1.96ರಲ್ಲಿ ವರ್ಗಾಯಿಸಲಾಗಿದೆ.

ಆ) ಮೈಸೂರು ನಗರ ಸಭೆಯಿಂದ ದಿ. 5.1.96ರ ಸರ್ಕಾರದ ಆದೇಶದಲ್ಲಿದ್ದ ನಿಯಮಗಳನ್ನು ಪೂರೈಸರಿರುವ ಕಾರಣ ಕಟ್ಟಡದ ಕಾಮಗಾರಿ ಕಾರ್ಯ ಕೈಗೆತ್ತಿ ಕೊಂಡಿರುವುದಿಲ್ಲ.

ವಿಷಯ:- ಪರಿಸರ ಮಾಲಿನ್ಯದ ಕಾಯ್ದೆ ಅಡಿಯಲ್ಲಿ ಹೂಡಿರುವ ಮೊಕದ್ದಮೆಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 459 (1104)

ಶ್ರೀ ಎಸ್.ಪಿ.ಮುದ್ದಹನುಮೇಗೌಡ (ಕುಣಿಗಲ್):- ಮಾನ್ಯ ಪರಿಸರ ಮತ್ತು ಜೀವಿಶಾಸ್ತ್ರ, ವಿಜ್ಞಾನ, ತಂತ್ರಜ್ಞಾನ ಮತ್ತು ಅಸಂಪ್ರದಾಯಕ ಇಂಧನ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪರಿಸರ ಮಾಲಿನ್ಯದ ಕಾಯ್ದೆಗಳ ಉಲ್ಲಂಘನೆಗಾಗಿ ಇದುವರೆವಿಗೆ ಹೂಡಿರುವ ಮೊಕದ್ದಮೆಗಳೆಷ್ಟು?

ಆ) ಈ ಬಗ್ಗೆ ಹೊರಬಂದ ತೀರ್ಪುಗಳ ವಿವರ ನೀಡುವುದು?

ಶ್ರೀ ಬಸವರಾಜ ನೀ. ಶಿವಣ್ಣನವರ್ (ಪರಿಸರ ಮತ್ತು ಜೀವಿಶಾಸ್ತ್ರ, ವಿಜ್ಞಾನ, ತಂತ್ರಜ್ಞಾನ ಮತ್ತು ಅಸಂಪ್ರದಾಯಕ ಇಂಧನ ರಾಜ್ಯ ಸಚಿವರು):-

ಅ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಜಲ ಮತ್ತು ವಾಯು ಮಾಲಿನ್ಯವನ್ನು ನಿಯಂತ್ರಿಸಲು ಜಲ ಮಾಲಿನ್ಯ (ನಿವಾರಣಾ ಮತ್ತು ನಿಯಂತ್ರಣ) ಕಾಯ್ದೆ 1974, ವಾಯು ಮಾಲಿನ್ಯ (ನಿವಾರಣಾ ಮತ್ತು ನಿಯಂತ್ರಣ) ಕಾಯ್ದೆ 1981ರ ಅನ್ವಯ ಕೆಲವು ನಿಯಮಗಳನ್ನು ಜಾರಿಗೊಳಿಸುತ್ತಿದೆ. ಪರಿಸರ ಮಾಲಿನ್ಯದ ಕಾಯ್ದೆಯ ಉಲ್ಲಂಘನೆ ಕಂಡು ಬಂದಾಗ, ಉಲ್ಲಂಘಿಸಿದವರ ವಿರುದ್ಧ ಕಾನೂನಿನಲ್ಲಿ ಅವಕಾಶವಿರುವಂತೆ ಮೊಕದ್ದಮೆಗಳನ್ನು ಹೂಡಲಾಗಿದೆ.

ಜಲ ಕಾಯ್ದೆಯಡಿಯಲ್ಲಿ 98 ಪ್ರಕರಣಗಳನ್ನು ಹಾಗೂ ವಾಯು ಕಾಯ್ದೆಯಡಿಯಲ್ಲಿ 41 ಪ್ರಕರಣಗಳನ್ನು ಮಾಡಲಾಗಿದೆ.

ಆ) ಜಲ ಮಾಲಿನ್ಯ (ನಿವಾರಣಾ ಮತ್ತು ನಿಯಂತ್ರಣ) ಕಾಯ್ದೆಯಡಿಯಲ್ಲಿ 59